ಎಕ್ಸಿಕ್ಯೂಷನ್ ನಂ : 05-2012 ಪಿಡಬ್ಲು-1

ಅರ್ಜಿಯ ಮೇರೆಗೆ ಸಾಕ್ಷಿಯನ್ನು ದಿನಾಂಕ: 14.02.2019 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಎದುರುದಾರರ ಪರ ಶ್ರೀ ಎನ್ ಹೆಚ್ ಪಿ ವಕೀಲರಿಂದ

ದಾವಾ ಆಸ್ತಿಯ ಕಂದಾಯವನ್ನು ನಿಡಿ 2 ರಿಂದ 12ರ ಪ್ರಕಾರ ರವೀಂದ್ರ ಡವಳೆಯವರೇ ತುಂಬುತ್ತಿದ್ದಾರೆ ಅಂದರೆ ಸರಿಯಲ್ಲ. ವಿದ್ಯುಚ್ಛಕ್ತಿ ಸಂಪರ್ಕ ಪಡೆದು ವಿದ್ಯುತ್ ಬಿಲ್‌ನ್ನು ನಿಡಿ 13 ರಿಂದ 36ರ ಪ್ರಕಾರ ಅವರೇ ಪಾವತಿ ಮಾಡುತ್ತಿದ್ದಾರೆ ಅಂದರೆ ಸರಿಯಲ್ಲ. ಸರ್ವೆ ನಂ 16 ಮತ್ತ 22 ರಲ್ಲಿ ಒಂದು ಕ್ರೈಸ್ತ ಕುಟೀರ ಇತ್ತು ಅಂದರೆ ಸರಿಯಲ್ಲ. ಸದರಿ ಕುಟೀರಕ್ಕೆ ರವೀಂದ್ರ ಡವಳೆಯವರೇ ಟೆಲಿಫೋನ್ ಸಂಪರ್ಕ ಪಡೆದು ಅವರೇ ಬಿಲ್ ಪಾವತಿ ಮಾಡುತ್ತಿದ್ದರು ಅಂದರೆ ಸರಿಯಲ್ಲ.

ನಮ್ಮ ಮನೆಯಲ್ಲಿ ಹುಲಿಗಮ್ಮ ಕೋಂ ನೀಲಪ್ಪ ಗುಡಕಲ್ ಎಂಬುವವರು ಇಲ್ಲ. ನನ್ನ ತಂದೆ ಈ ಹಿಂದೆ ದಾಖಲಿಸಿದ ಅಸಲು ದಾವಾ ನಂ 10/2012ರ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ಅದರ ಸಂಪೂರ್ಣ ಮಾಹಿತಿ ನನಗೆ ಇದೆ. ಕೆ ಬಿ ರೆನಾಲ್ಡ್‌ರವರು ಆಸ್ತಿಯು ಯುನೈಡೆಟ್ ಬಾಸೆಲ್ ಮಿಷನ್‌ಗೆ ಸಂಬಂಧಿಸಿಲ್ಲ ಅದು ನನ್ನ ತಾತರವರಿಗೆ ಸಂಬಂಧಪಟ್ಟದ್ದು ಎಂದು ಪತ್ರ ಬರೆದುಕೊಟ್ಟಿದ್ದರು. ಸಾಕ್ಷಿಗೆ ದಿ: 24.05.2009ರ ಖರೀದಿ ಕರಾರು ಪತ್ರದ ದಾಖಲೆಯನ್ನು ತೋರಿಸಲಾಗಿ ಅವರು ದಾಖಲೆಯನ್ನು ಓದಿ ನೋಡಿ ಈ ಪತ್ರದ ಪ್ರಕಾರ ನನ್ನ ತಾತನಿಗೆ ಆಸ್ತಿ ಕೊಟ್ಟಿಲ್ಲ ಅಂತ ಹೇಳುತ್ತಾರೆ. ಸಾಮಾನ್ಯವಾಗಿ ಯಾರು ಮಾಲೀಕರು ಇರುತ್ತಾರೋ ಅವರು ಆಸ್ತಿಯನ್ನು ಮಾರಾಟ ಮಾಡುವ ಹಕ್ಕು ಹೊಂದಿರುತ್ತಾರೆ ಅಂದರೆ ಸರಿ. ದಿ: 24.05.2009ರ ಖರೀದಿ ಪತ್ರಕ್ಕೆ ಛಾಪ ಕಾಗದವನ್ನು ಹುಲಿಗಮ್ಮ ಕೋಂ ನೀಲಪ್ಪ ಗುಡಕಲ್‌ರವರೇ 2006 ರಲ್ಲಿ ಖರೀದಿಸಿದ್ದಾರೆ ಅಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸದರಿ ಹುಲಿಗಮ್ಮ ಕೋಂ ನೀಲಪ್ಪ ಗುಡಕಲ್ ಯಾರು ಅಂತ ಗೊತ್ತಿಲ್ಲ ಅಂತ ನುಡಿಯುತ್ತಾರೆ. ಸದರಿ ಪತ್ರದಲ್ಲಿ ಯುನೈಡೆಟ್ ಬಾಸೆಲ್ ಮಿಷನ್ ಚರ್ಚ್ ರವರು ಮುದ್ರಾಂಕ ಶುಲ್ಕ ಪಾವತಿಸಿದ ಬಗ್ಗೆ ಕಂಡು ಬರುವುದಿಲ್ಲ ಅಂದರೆ ಸಾಕ್ಷಿಯು ಸದರಿ ಚರ್ಚ್ ನಮಗೆ ಸಂಬಂಧಿಸಿಲ್ಲ ಅಂತ ನುಡಿಯುತ್ತಾರೆ. ಅಸಲು ದಾವಾ ನಂ 10/2012 ರಲ್ಲಿ ಯುನೈಡೆಟ್ ಬಾಸೆಲ್ ಮಿಷನ್ ಚರ್ಚ್‌ರವರ ಪರವಾಗಿ ಕೆ ಬಿ ರೆನಾಲ್ಡ್ ರವರು ಒಟ್ಟು ಮುಕ್ತಿಯಾರ್ ನಾಮೆದಾರ ಆಧಾರದ ಮೇಲೆ ತಕರಾರು ಸಲ್ಲಿಸಿದ್ದಾರೆ ಅಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಅವರು ಒಟ್ಟು ಮುಕ್ತಿಯಾರ್ ನಾಮೆದಾರ ಪತ್ರವನ್ನು ಹಾಜರು ಮಾಡಿಲ್ಲ ಅಂದರೆ ಸರಿಯಲ್ಲ. ಸದರಿ ಪತ್ರದಲ್ಲಿ ಕೆ ಬಿ ರೆನಾಲ್ಡ್ ರವರನ್ನು ಯಾವಾಗಲೂ ಒಟ್ಟು ಮುಕ್ತಿಯಾರ್ ನಾಮೆದಾರನಿಗೆ ಆಸ್ತಿ ಪರಭಾರೆ ಮಾಡುವ ಹಕ್ಕು ಕೊಟ್ಟಿದ್ದೇವೆ ಅಂತ ಹೇಳಿಲ್ಲ ಅಂದರೆ ಸರಿಯಲ್ಲ. ಅಸಲು ದಾವಾ 10/2012 ರಲ್ಲಿ ಸಾಕ್ಷ್ಯ ವಿಚಾರಣೆ ನಡೆದು ತೀರ್ಪು ಬಂದಿದೆ. ನನಗೆ ಇಂಗ್ಲೀಷ್ ಭಾಷೆ ಓದಲು ಬರುತ್ತದೆ. ಸದರಿ ದಾವೆಯಲ್ಲಿ ದಾವೆಯು ರಾಜಿ ಮೂಲಕ ಇತ್ಯರ್ಥ ಆಗಿದೆ ಅಂತ ಬರೆದಿದೆ ಅಂದರೆ ಸರಿ. ಸದರಿ ರಾಜಿ ಪತ್ರದ ಪ್ರಕಾರ ಕೆ ಬಿ ರೆನಾಲ್ಡ್ ಮತ್ತು ನನ್ನ ತಂದೆಯವರು ರಾಜಿ ಮಾಡಿಕೊಂಡು ಮೊದಲು ಕ್ರಯಪತ್ರ ಬರೆದುಕೊಟ್ಟು ನಂತರ ದಾವಾ ಆಸ್ತಿ ಕಬ್ಜಾ ಕೊಡುವುದಾಗಿ ಹೇಳಿದ್ದಾರೆ ಅಂದರೆ ಸರಿಯಲ್ಲ. ದರಖಾಸ್ತು ಅರ್ಜಿಯಲ್ಲಿ ಡಿಕ್ರಿ ಪ್ರಕಾರ ಖರೀದಿ ಪತ್ರ ಬರೆದುಕೊಟ್ಟು ಹಾಗೂ ಆಸ್ತಿ ಕಬ್ಜಾ ಕೊಡಬೇಕೆಂದು ಕೇಳಿಕೊಂಡಿದ್ದೇವೆ ಅಂದರೆ ಸರಿ.

ದಾವಾ ಆಸ್ತಿ ಯುನೈಟೆಡ್ ಬಾಸೆಲ್ ಮಿಷನ್ ಚರ್ಚ್ ಸಂಬಂಧಿಸಿಲ್ಲ ಅಂತ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯುನೈಟೆಡ್ ಬಾಸೆಲ್ ಮಿಷನ್ ಚರ್ಚ್ ರವರ ಪರವಾಗಿ ರವೀಂದ್ರ ಡವಳೆಯವರ ತಂದೆ ಹಾಗೂ ಅವರ ನಂತರ ರವೀಂದ್ರ ಡವಳೆರವರೇ ಇಲ್ಲಿಯವರೆಗೂ ಕಬ್ಜಾ ಹೊಂದಿದ್ದಾರೆ ಅಂದರೆ ಸರಿಯಲ್ಲ. ಚರ್ಚ್‌ನ ಆಸ್ತಿಯನ್ನು ಲಪಾಟಾಯಿಸುವ ಸಲುವಾಗಿ ಸುಳ್ಳು ರಾಜಿ ಡಿಕ್ರಿ ಪಡೆದಿದ್ದೇವೆ ಅಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,
ಸಹಿ/-
ದಿವಾಣಿ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,